www.ijcrt.org © 2025 IJCRT | Volume 13, Issue 3 March 2025 | ISSN: 2320-2882

IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಹೆಣ್ಣಿನ ಚಿತ್ರಣ

ಡಾ.ಲಕ್ಷ್ಮೀನಾರಾಯಣ ಎ.ವಿ
ಸಹ ಪ್ರಾಧ್ಯಾಪಕರು
ಸ.ಪ್ರ.ದ.ಕಾ ಕೆಂಗೇರಿ

ಹೆಣ್ಣಿಗೆ ಸಂಪೂರ್ಣ ಸ್ವಾತಂತ್ರ್ಯ ಸಮಾನತೆಯನ್ನು ನೀಡಿದ ಯಾವುದಾದರೂ ದೇಶ ಅಥವಾ ಧರ್ಮ ಇದೆ ಎಂದು ಹೇಳುವುದು ಕಷ್ಟಸಾಧ್ಯವೆನಿಸುತ್ತದೆ. ಪ್ರಪಂಚದಲ್ಲಿ ಅನೇಕ ದೇಶಗಳು ವಿಜ್ಞಾನ, ತಂತ್ರಜ್ಞಾನ, ಕೃಷಿ, ಕೈಗಾರಿಕೆ, ಆಧ್ಯಾತ್ಮ–ಹೀಗೆ ಸಕಲ ಕ್ಷೇತ್ರಗಳಲ್ಲಿಯೂ ತನ್ನ ಸಾಧನೆಯನ್ನು ಗಗನದೆತ್ತರಕ್ಕೆ ಏರಿಸಿಕೊಂಡಿರಬಹುದು. ಆದರೆ ಹೆಣ್ಣನ್ನು ಮಾತ್ರ ಹೇಗೆ ನಡೆಸಿಕೊಳ್ಳಬೇಕು ಮತ್ತು ಅವಳೂ ನಮ್ಮಂತೆ ಮನಸ್ಸಿರುವ ವ್ಯಕ್ತಿ; ಅವಳಿಗೂ ಭಾವನೆಗಳಿವೆ ಎಂದು ಭಾವಿಸಿ ಪುರುಷನ ಸರಿಸಮಾನವಾಗಿ ನಡೆಸಿಕೊಂಡಿರುವುದನ್ನು ಅವಲೋಕಿಸಿದರೆ ಪ್ರತಿಯೊಂದು ಧರ್ಮವೂ ಒಂದಲ್ಲ ಒಂದು ರೀತಿಯ ಶೋಷಣೆಯನ್ನು ನಡೆಸುತ್ತಾ ಬಂದಿರುವುದು ವೇದ್ಯವಾಗುತ್ತದೆ. "ಭಗವಾನ್ ಶಂಕರಾಚಾರ್ಯರಂತೂ ಹೆಣ್ಣನ್ನು ನರಕಕ್ಕೆ ದಾರಿ ಎಂದಿದ್ದಾರೆ. ಬೈಬಲ್‌ನಲ್ಲಿ ಸ್ತ್ರೀಯನ್ನು ಎಲ್ಲ ರೀತಿಯ ಅನರ್ಥ ಅಹಿತಗಳ ಮೂಲ (ಖಿಠಿಠಿಣ ಠಜ ಚಿಟಟ ಜತುಟ) ಎಂದಿದ್ದಾರೆ. ಯೂರೋಪಿನ ಲ್ಯಾಟಿನ್ ಧರ್ಮ ಬೋಧಕ  ಟ್ಯೂರ್ ಟೂಲಿಯನ್ ಹೆಣ್ಣಿನ ಬಗ್ಗೆ ಅವಳು ಸೈತಾನನ ಬಾಗಿಲು, ದೈವ ನಿಯಮ ಅಥವಾ ಧರ್ಮವನ್ನು ಪರಿತ್ಯಜಿಸುವ ಮೊಟ್ಟ ಮೊದಲ ವ್ಯಕ್ತಿ ಎಂದಿದ್ದಾರೆ. ಸಂತ ಪದವಿಯನ್ನು ಪಡೆದ ಧರ್ಮ–ಬೋಧಕ ಅಗಸ್ಟಿನ್ ತಮ್ಮ ಶಿಷ್ಯವೃಂದಕ್ಕೆ–ಹೆಣ್ಣು ತಾಯಿಯೇ ಆಗಲಿ ಅಥವಾ ಸೋದರಿಯೇ ಆಗಲಿ, ಅವಳಲ್ಲಿ ಅಡಗಿರುವ ಅವಳ ಮೂಲರೂಪದಿಂದ ನಾವು ಯಾವಾಗಲೂ ಎಚ್ಚರದಿಂದ ಇರಬೇಕು ಎಂದು ಉಪದೇಶಿಸಿದ್ದರು."[1] ಹೀಗೆ ಶರಶ್ಚಂದ್ರ ಚಟ್ಟೋಪಾದ್ಯಾಯರು ಹೆಣ್ಣಿನ ಸ್ಥಾನಮಾನವನ್ನು ಕುರಿತ ತಮ್ಮ ಲೇಖನದಲ್ಲಿ ವಿಸ್ತಾರವಾಗಿ ವಿಶ್ಲೇಷಿಸುತ್ತಾರೆ. ಇಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಯಾವ ಧರ್ಮ ಅಥವಾ ದೇಶವನ್ನು ಸಹ ಬಿಟ್ಟಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ವೇದಕಾಲದ ನಂತರ ಜಾತಿ ವ್ಯವಸ್ಥೆ ಮತ್ತು ಹೆಣ್ಣು–ಗಂಡು ನಡುವಿನ ಭೇದಭಾವ ಗಟ್ಟಿಗೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದು. ಹಾಗಿದ್ದರೂ ಅನೇಕ ಹಂತಗಳಲ್ಲಿ ಹೆಣ್ಣು ಪುರುಷನ ಅಧಿಪತ್ಯದಲ್ಲಿ ಮತ್ತು ಅವನ ನಿಯಂತ್ರಣದಲ್ಲೇ ತನ್ನ ಬದುಕನ್ನು ಸಾಗಿಸುವ ಸ್ಥಿತಿ ಬಂದಿದೆ. "ಸಮಾಜದ ಇತಿಹಾಸವನ್ನು ಅವಲೋಕಿಸಿದರೆ ಹೆಣ್ಣೆಂದರೆ ವ್ಯಕ್ತಿತ್ವವೇ ಇಲ್ಲದ ಭೂಮಿ, ಗೋವುಗಳಂತೆ ದಾನ ಕೊಡುವ, ತೆಗೆದುಕೊಳ್ಳುವ, ವಿದ್ಯೆಗೆ, ಸ್ವಾತಂತ್ರ್ಯಕ್ಕೆ ಅನರ್ಹಳಾದ ಕೇವಲ ಒಂದು ವಸ್ತು ಎನ್ನುವ ನಂಬಿಕೆಯೇ ರೂಢ ಮೂಲವಾಗಿರುವುದು."[2] ಅದರಲ್ಲೂ ಆರ್ಥಿಕ ಚಟುವಟಿಕೆ ಮತ್ತು ವ್ಯಾಪಾರಗಳ ನಿಯಂತ್ರಣವನ್ನು

ಪುರುಷನೇ ಮಾಡುತ್ತಿದ್ದ. ಇಚಿತಹ ಪ್ರಮುಖವಾದ ವಿಚಾರಗಳಲ್ಲಿ ಹೆಣ್ಣಿನ ಪಾತ್ರಕ್ಕೆ ಅವಕಾಶವೇ ಇರಲಿಲ್ಲ. ಹೆಣ್ಣು ಕೇವಲ ಅವನ ಆಜ್ಞೆ, ಸೂಚನೆಗಳನ್ನು ಪಾಲಿಸುತ್ತಾ ನಾಲ್ಕು ಗೋಡೆಯ ಮಧ್ಯ ತನ್ನ ಜೀವಿತಾವಧಿಯ ಕಾಲವನ್ನು ಶೋಚನೀಯವಾದ ಸ್ಥಿತಿಯಲ್ಲಿಯೇ ನೂಕಬೇಕಿತ್ತು.

ನಮ್ಮ ಭಾರತೀಯ ಪುರಾಣ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಸ್ತ್ರೀಯರು ಎದುರಿಸಿದ ಸಮಸ್ಯೆಗಳು ಮತ್ತು ಅವಮಾನಗಳನ್ನು ಕಾಣಬಹುದು. ರಾಮನಿಂದ ಅವಮಾನಿಸಲ್ಪಟ್ಟ ಸೀತೆ ಅಗ್ನಿ ಪ್ರವೇಶ ಮಾಡಿ ತನ್ನ ಪಾರಿವ್ರತ್ಯವನ್ನು ಮೆರೆಯಬೇಕಾಯಿತು. ಇಲ್ಲಿನ ಸೀತೆ ಅಗ್ನಿ ಪ್ರವೇಶಕ್ಕೂ ಮುನ್ನ ಯಾವುದೇ ಬಗೆಯ ಪ್ರತಿಭಟನೆಯನ್ನಾಗಲಿ, ಪ್ರತಿರೋಧವನ್ನಾಗಲೀ ತೋರುವುದಿಲ್ಲ. ಇದೆಲ್ಲ ತನ್ನ ಹಣೆಬರಹವೆಂದೇ ಭಾವಿಸುತ್ತಾಳೆ. ಅರಮನೆಯಲ್ಲಿರಲಿ, ಅರಣ್ಯದಲ್ಲಿರಲಿ ಅಥವಾ ಗುರುಮನೆಯಲ್ಲಿರಲಿ ಸೀತೆ ಗಂಡನ ನೆರಳಲ್ಲೆ ತನ್ನ ಬದುಕು ಸಾಗಿಸುತ್ತಾಳೆ. ಹೀಗಾಗಿ ದ್ರೌಪದಿ ಮಾತ್ರ ಪ್ರತಿಭಟನೆಯ ಧ್ವನಿಯಾಗಿದ್ದಾಳೆ. ಅದರಲ್ಲೂ ವಿಶೇಷವಾಗಿ ಕುಮಾರವ್ಯಾಸ ಭಾರತದ ದ್ರೌಪದಿ ಬಂಡಾಯದ ಪ್ರತೀಕವಾಗಿದ್ದಾಳೆ. “ಮೂರು ಲೋಕದ ಗಂಡರು ನನ್ನೊಬ್ಬಳನಾಳಲಾರಿರಿ” ಎನ್ನುವ ಅವಳ ಮಾತು ಪುರುಷ ಪ್ರಧಾನ ವ್ಯವಸ್ಥೆಯನ್ನು ಮೊದಲ ಬಾರಿಗೆ ಬೆಚ್ಚಿ ಬೀಳಿಸುತ್ತದೆ. ಕುಮಾರವ್ಯಾಸನ ದ್ರೌಪದಿಯಂತಹ ಬಂಡಾಯದ ಪಾತ್ರಗಳು ಹಳಗನ್ನಡ ಸಾಹಿತ್ಯ ಸಂದರ್ಭದಲ್ಲಿ ಬಹಳ ವಿರಳ.

ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ ಮುಂತಾದ ವಚನಾಕಾರ್ತಿಯರು ತಮ್ಮ ವಚನಗಳಲ್ಲಿ ಸ್ತ್ರೀ ಸಂವೇದನೆಯ ಹಲವು ನೆಲೆಗಳನ್ನು ಚರ್ಚಿಸಿದ್ದಾರೆ. ಆದರೆ ಇವರೂ ಕೂಡಾ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಂಕಟ ಪಟ್ಟಿರುವುದನ್ನು “ಎರೆದ ಮುಳ್ಳುಗಳಂತೆ ಪರಗಂಡರೆನಗವ್ವ” ಎನ್ನುವ ಮಾತಿನಿಂದಲೇ ತಿಳಿಯಬಹುದು.

ಶತಶತಮಾನಗಳಿಂದ ವೈದಿಕ ಪರಂಪರೆಯಲ್ಲಿ ಹೆಣ್ಣು ಎರಡನೇ ದರ್ಜೆಯ ಪ್ರಜೆಯಾಗಿ ಜೀವಿಸುತ್ತಿದ್ದು, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅತ್ಯಂತ ಹೀನವಾದ, ಅವಮಾನಕರವಾದ ಸ್ಥಿತಿಯಲ್ಲಿ ಬಾಳು ಸಾಗಿಸುತ್ತಾ ಬಂದ ಹೆಣ್ಣಿಗೆ ಅನೇಕ ರೀತಿಯ ನೀತಿ–ನಿರ್ಬಂಧಗಳನ್ನು, ಅಮಾನವೀಯ ಕಟ್ಟು ಕಟ್ಟಳೆಗಳನ್ನು ಒತ್ತಾಯಪೂರ್ವಕವಾಗಿ ಹೇರಿ ಅವಳ ಭಾವನೆಗಳನ್ನು, ಆಲೋಚನೆ ಮತ್ತು ಚಿಂತನೆಗಳನ್ನು ಹತ್ತಿಕ್ಕಿ ತನ್ನ ಆಜ್ಞಾನುವರ್ತಿಯನ್ನಾಗಿಸಿಕೊಂಡ ಪುರುಷ ಅವಳನ್ನು ಒಂದು ವಸ್ತುವಿನಂತೆ ಬಳಸಿಕೊಂಡು ಬಂದಿದ್ದಾನೆ. ಅವಳ ಭಾವನೆಗಳಿಗೆ ತಡೆಯೊಡ್ಡಿ ನಾಲ್ಕು ಗೋಡೆಗಳ ಮಧ್ಯೆ ಅವಳನ್ನು ಇರುವಂತೆ ನೋಡಿಕೊಂಡ ವೈದಿಕ ಸಂಸ್ಕೃತಿಯ ನೀತಿಗಳನ್ನು ಭಸ್ಮಗೊಳಿಸಿ ಹೆಣ್ಣಿಗೆ ಸ್ವಾತಂತ್ರ್ಯ ಸಮಾನತೆಯ ಬಾಗಿಲುಗಳನ್ನು ತೆರೆದ ವಚನ ಚಳುವಳಿಯನ್ನು ಭಾರತದ ಇತಿಹಾಸದಲ್ಲೇ ಗಮನಾರ್ಹ ಬದಲಾವಣೆ ಎಂದರೆ ತಪ್ಪಾಗಲಾರದು. ವಚನ ಚಳುವಳಿಯ ಪರಿಣಾಮದಿಂದ ವಿವಿಧ ವೃತ್ತಿಯಲ್ಲಿ ತೊಡಗಿದ್ದ, ವಿವಿಧ ಜಾತಿ ವರ್ಗಗಳ ಸ್ತ್ರೀಯರು ಯಾವುದೇ ಅಳುಕಿಲ್ಲದೆ ವಚನ ಚಳುವಳಿಯಲ್ಲಿ ತೊಡಗಿಸಿಕೊಂಡರು. ಧಾರ್ಮಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಮತ್ತು ಸಾಧನೆಯನ್ನು ಮಾಡಲು ಸ್ತ್ರೀಯರಿಗೆ ಅವಕಾಶವಾಯಿತು. ಹೆಣ್ಣು–ಗಂಡು ಭೇದವಿಲ್ಲದೆ ಸದಾಚಾರ, ಸದ್ವರ್ತನೆಗಳಿಂದ ಸಾಧನೆಯ ಸಿದ್ಧಿಗೆ ಪಾತ್ರರಾದರು. ಹೆಣ್ಣು ಮೋಕ್ಷ ಪಡೆಯಲುಬಹುದು ಎಂಬುದನ್ನು ಶರಣರು ತೋರಿಸಿಕೊಟ್ಟರು. ಹೀಗೆ ಶರಣರು ಹೆಣ್ಣಿಗೆ ನೀಡಿದ ಮಹತ್ವವನ್ನು ಕೆಳಗಿನ ವಚನಗಳಿಂದ ತಿಳಿಯಬಹುದು.

“ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತ್ತು

ತಾ ಮಾಡಿದ ಹೆಣ್ಣು ತೊಡೆಯನ್ನೇರಿತ್ತು

ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನ್ನೇರಿತ್ತು

ತಾ ಮಾಡಿದ ಹೆಣ್ಣು ನಾರಾಯಣನ ಎದೆಯನ್ನೇರಿತ್ತು

ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ,

ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ"[3]

ಹೀಗೆ ಹೆಣ್ಣನ್ನು ದೈವತ್ವಕ್ಕೆ ಏರಿಸಿದವರು ವಚನಾಕಾರರು. ಇಂತಹ ವಚನಗಳೇ 12ನೇ ಶತಮಾನದಲ್ಲಿ ಸ್ತ್ರೀಯರಿಗೆ ನೀಡಲಾಗಿದ್ದ ಸ್ಥಾನಮಾನ ಮತ್ತು ಮಹತ್ವಗಳನ್ನು ತಿಳಿಸುತ್ತವೆ.

"ಆದ್ಯರ ಅರವತ್ತು ವಚನಕ್ಕೆ ಡಣ್ಣಾಯಕರ ಇಪ್ಪತ್ತು ವಚನ

ಡಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ

ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ

ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನ ಸಂಗಯ್ಯನಲ್ಲಿ

ಮಹಾದೇವಿಯಕ್ಕನ ಒಂದು ವಚನ ನಿರ್ವಚನ ಕಾಣ ಸಿದ್ಧರಾಮ"[4]

ಎಂದು ಚನ್ನಬಸವಣ್ಣ ಸಿದ್ಧರಾಮನಿಗೆ ಹೇಳುವ ಈ ವಚನದಲ್ಲಿ ಅಕ್ಕ ಮಹಾದೇವಿಯ ಪ್ರಾಮುಖ್ಯತೆ ಏನೆಂಬುದು ಸ್ಪಷ್ಟವಾಗುತ್ತದೆ. ಹೀಗೆ ವಚನ ಚಳುವಳಿ ಸ್ತ್ರೀ ವರ್ಗಕ್ಕೆ ನೀಡಿದ ಸ್ವಾತಂತ್ರ್ಯ ಮತ್ತು ಸಮಾನ ಸ್ಥಾನಮಾನಗಳನ್ನು ಮರೆಯಲಾಗದು.

"ಹೀಗೆ ಆಧುನಿಕ ಸಾಹಿತ್ಯದ ಕಾಲದವರೆಗೂ ಕಂಡುಬರುವ ಸ್ತ್ರೀ ಪಾತ್ರಗಳಲ್ಲಿ ವ್ಯವಸ್ಥೆಯನ್ನು ಒಪ್ಪಿಕೊಂಡು ಏನೊಂದೂ ಪ್ರತಿಭಟನೆಯನ್ನು ತೋರದೆ ಸ್ತ್ರೀ ಪಾತ್ರಗಳಲ್ಲಿ ಊರ್ಮಿಳೆ, ರೇಣುಕೆಯಂತಹ ಪಾತ್ರಗಳು ತಾನಿಚ್ಚಿಸಿದವನನ್ನು ವರಿಸಿದ ಶಕುಂತಲೆ, ದಾಂಪತ್ಯದೊಳಗಿದ್ದೂ ಪರಪುರುಷನನ್ನು ಮೋಹಿಸುವ ಅಮೃತಮತಿ. ತಮ್ಮ ಶಕ್ತಿಯಿಂದ ಪತಿಯನ್ನು ಬದುಕಿಸಿದ, ತ್ರಿಮೂರ್ತಿಗಳನ್ನು ಮಕ್ಕಳಾಗಿಸಿದ, ಜಗತ್ತನ್ನು ರಾಕ್ಷಸರಿಂದ ರಕ್ಷಿಸಿದ ಪಾತ್ರಗಳು, ಪ್ರತಿಭಟಿಸಿದ ದ್ರೌಪದಿ, ಅಂಬೆಯಂತಹ ಪಾತ್ರಗಳು" ನಮ್ಮ ಸಾಹಿತ್ಯದಲ್ಲಿ ನಿರಂತರವಾಗಿ ಕಾಣಸಿಗುತ್ತವೆ.

ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಿನಿಮಾಗಳಲ್ಲೂ ಹೆಣ್ಣಿನ ಮಾನಸಿಕ ತೊಳಲಾಟಗಳು, ದೈಹಿಕ ಬಯಕೆಗಳ ಸೂಕ್ಷ್ಮ ವಿವರಗಳಲ್ಲದೆ ಅಸಮಾನತೆ, ಲಿಂಗತಾರತಮ್ಯ ಮುಂತಾದ ವೈರುಧ್ಯಗಳನ್ನು ಕಾಣುತ್ತೇವೆ. ಆಧುನಿಕ ಕನ್ನಡ ಸಾಹಿತ್ಯದ ನವೋದಯ, ನವ್ಯ, ಪ್ರಗತಿಶೀಲ ಸಂದರ್ಭದ ಸಾಹಿತ್ಯ ಕೃತಿಗಳನ್ನು ಆಧರಿಸಿ ನಿರ್ಮಿಸಿದ ಕೆಲವೇ ಚಿತ್ರಗಳು ನಮ್ಮಲ್ಲಿವೆ. ಉದಾ: ಮಾಸ್ತಿಯವರ 'ಕಾಕನ ಕೋಟೆ', ಕುವೆಂಪು ಅವರ 'ಕಾನೂರು ಹೆಗ್ಗಡತಿ', ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ', ಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರ', 'ಪರಸಂಗದ ಗೆಂಡೆತಿಮ್ಮ', ಕೆ.ಎಸ್. ನರಸಿಂಹಸ್ವಾಮಿ ಅವರ 'ಮೈಸೂರು ಮಲ್ಲಿಗೆ', ಪಿ. ಲಂಕೇಶರ 'ಪಲ್ಲವಿ', 'ಎಲ್ಲಿಂದಲೋ ಬಂದವರು'. ಹೀಗೆ ಉತ್ತಮ ಮತ್ತು ಸದಭಿರುಚಿಯ ಚಿತ್ರಗಳು ಕನ್ನಡ ಸಿನಿಮಾ ಲೋಕಕ್ಕೆ ವಿಶೇಷವಾದ ಮನ್ನಣೆಯನ್ನು ತಂದುಕೊಟ್ಟಿವೆ.

"ಕನ್ನಡ ಕಾದಂಬರಿ ಸಾಹಿತ್ಯದ ಆರಂಭವನ್ನು ಗುರುತಿಸಿದರೂ ಹೆಚ್ಚಾಗಿ ಸ್ತ್ರೀ ಪ್ರಧಾನವಾದ ಕಾದಂಬರಿಗಳೇ ಕಂಡುಬರುತ್ತವೆ. ಸೀತೆ, ವಾಗ್ದೇವಿ, ಇಂದಿರಾ, ಇಂದಿರಾಬಾಯಿ ಮುಂತಾದವುಗಳ ಹೆಸರು ಸ್ತ್ರೀ ಪ್ರಾಧಾನ್ಯವನ್ನೇ ಹೇಳುತ್ತವೆ. ಆದರೆ ಆಂತರ್ಯದಲ್ಲಿ ಸಾಂಪ್ರದಾಯಿಕತೆಯನ್ನೇ ಪ್ರತಿಪಾದಿಸುತ್ತವೆ. ಕೆರೂರು ವಾಸುದೇವಚಾರ್ಯರ 'ಇಂದಿರೆ' ಆಧುನಿಕ ಶಿಕ್ಷಣ

ಪಡೆದ ಹೆಣ್ಣು, ತನಗಿಷ್ಟ ಬಂದವನನ್ನು ಪ್ರೀತಿಸುತ್ತಾಳೆ. ಆದರೆ ಸ್ತ್ರೀ ವಿಮೋಚನೆ, ಸ್ವಾತಂತ್ರ್ಯ, ವಿಧವಾವಿವಾಹದ ವಿರುದ್ಧ ಮಾತನಾಡುತ್ತಾಳೆ. ಹೀಗೆ ಸ್ತ್ರೀ ಪಾತ್ರಗಳು ಮುಖ್ಯವಾದರೂ ಅವುಗಳ ಆಲೋಚನೆಗಳು ಮಾತ್ರ ಪುರುಷ ಪ್ರೇರಿತವೆ" ಎಂಬುದನ್ನು ತಿಳಿಯಬಹುದು. ಸ್ತ್ರೀಯರನ್ನು ನಿಕೃಷ್ಟವಾಗಿ ಇಲ್ಲವೇ ದೇವತೆಯಂತೆ ಚಿತ್ರಿಸುವ ಸಾಹಿತ್ಯದ ಸಂಚಿನಲ್ಲಿ ಸ್ತ್ರೀಯ ನಿಜವಾದ ಸ್ವರೂಪ ಪ್ರಕಟವಾಗಲೇ ಇಲ್ಲ.

ಆದರೆ 18ನೇ ಶತಮಾನದಲ್ಲಿ ಯೂರೋಪಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಸ್ತ್ರೀಯರು ಮನೆಯಿಂದ ಹೊರಬಂದರು. ಕಾರ್ಖಾನೆಗಳಲ್ಲಿ ದುಡಿಯಲು ಮನಸ್ಸು ಮಾಡಿದರು. ಇದರಿಂದ ಮಹಿಳೆಯರು ಒಂದುಗೂಡುವ, ತಮ್ಮ ಸಂವೇದನೆಗಳನ್ನು ಹಂಚಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು. ಆಧುನಿಕ ಶಿಕ್ಷಣ ಪಡೆದ ಮಹಿಳೆಯಲ್ಲಿ ಉಂಟಾದ ಜಾಗೃತಿಯ ಮನೋಭಾವದಿಂದ ಸ್ತ್ರೀ ಸಮಸ್ಯೆಗಳ ವಿರುದ್ಧ ಹೋರಾಡುವ ಮನಸ್ಸು ಪಕ್ವವಾಯಿತು. ಇಂತಹ ಸಂದರ್ಭದಲ್ಲಿಯೇ 'ಸ್ತ್ರೀವಾದಿ' ನೆಲೆಯ ಚಿಂತನೆಗಳು ಹೆಚ್ಚಾಗಿ ಸ್ತ್ರೀಯರು ಸಾಹಿತ್ಯ ರಚನೆಯಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡರು. ಹೆಣ್ಣನ್ನು, ಹೆಣ್ಣಿನ ಕಣ್ಣಿನಿಂದ ನೋಡುವ ಸಾಹಿತ್ಯ ಬಂದಿರುವುದು ತುಂಬಾ ಕಡಿಮೆ. ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಆ ಸಂಘಟನೆಯ ಬರಗೂರರು ಹೆಣ್ಣಿನ ಮನಸ್ಸಿನ ತಳಮಳಗಳನ್ನು, ಆಕೆಯ ಸಂವೇದನೆಗಳನ್ನು ಹೆಣ್ಣಿನ ಮನಸ್ಸಿನಿಂದಲೇ ನೋಡಿದರು. ಇದು ಬರಗೂರರ ಆಲೋಚನೆಯ ವೈಶಿಷ್ಟ್ಯ. ಅವರ ಸೃಜನಶೀಲ ಸಾಹಿತ್ಯ ಸೃಷ್ಟಿಯ ಎಲ್ಲಾ ಪ್ರಕಾರಗಳಲ್ಲೂ ಹೆಣ್ಣಿನ ಪರವಾದ ಒಂದು ಮಿಡಿತವನ್ನು ಗುರುತಿಸಬಹುದು. ಅದರಲ್ಲೂ ಸಿನಿಮಾಗಳಿಗೆ ಮೂಲವಾದ ಅವರ ಕತೆ ಕಾದಂಬರಿಗಳಲ್ಲಿ ಹೆಣ್ಣಿನದೇ ಮೇಲುಗೈ. ಅವರ ನಿರ್ದೇಶನದ ಸಿನಿಮಾಗಳಲ್ಲಿ 'ಹೆಣ್ಣೆ' ಪ್ರಮುಖ ಪಾತ್ರವಾಗಿರುತ್ತದೆ. 'ಬೆಂಕಿ'ಯ ಲಕ್ಷ್ಮೀ, 'ಸೂರ್ಯ'ದ ಸೀತಕ್ಕ, 'ಕ್ಷಾಮ'ದ ಚೆನ್ನಿ, 'ಒಂದು ಊರಿನ ಕಥೆ'ಯ ಪುಟ್ಟಿ, 'ಕೋಟೆ'ಯ ಸೀತೆ, 'ಶಾಂತಿ'ಯ ಶಾಂತಿ, 'ಶಬರಿ'ಯ ಶಬರಿ ಹೀಗೆ ಉದಾಹರಿಸುತ್ತಾ ಹೋಗಬಹುದು.

ಬಂಡಾಯ ಸಾಹಿತ್ಯ ಸಿದ್ಧಾಂತದ ತಳಹದಿಯ ಮೇಲಿರುವ ಬರಗೂರರ ಕತೆ – ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ ತೀವ್ರವಾಗಿ ತನ್ನ ಸ್ವರೂಪವನ್ನು ಪ್ರಕಟಿಸುತ್ತದೆ. ಮತ್ತು ಅವು ಅಷ್ಟೇ ಸಹಜವಾಗಿ ಸಮಾಜದ ಎಲ್ಲಾ ಸಿದ್ಧ ಅನ್ಯಾಯಗಳ ವಿರುದ್ಧ ಸಿಡಿಯುವ, ಬಂಡೇಳುವ ಪಾತ್ರಗಳಾಗಿರುತ್ತವೆ. ವರ್ಗ, ವರ್ಣ, ಲಿಂಗ ತಾರತಮ್ಯಗಳ ವಿರುದ್ಧ ತಮ್ಮ ಚಿಂತನೆಗಳ ಮೂಲಕ ಮುಖಾಮುಖಿ ನಡೆಸುವ ಬರಗೂರರು ಸಮಗ್ರ ಆರೋಗ್ಯಪೂರ್ಣ ಸಮಾಜದ ಕನಸಿಗರು. ತಮ್ಮ ಎಲ್ಲಾ ಸಾಹಿತ್ಯ ಕೃತಿ ಮತ್ತು ಸಿನಿಮಾಗಳಲ್ಲಿ ತಾನು ಬದುಕುವ ಸಮಾಜದ ಭಾವನೆಗಳನ್ನು ಅರ್ಥ ಮಾಡಿಕೊಂಡು ಅಲ್ಲಿನ ಮುಖ್ಯವಾದ ದೋಷಗಳನ್ನು ಗುರುತಿಸುತ್ತಾರೆ. ಇದರ ಜೊತೆಗೆ ಪರಿಹಾರವನ್ನು ಸೂಚಿಸುತ್ತಾರೆ. ಬರಗೂರರು ಸೂಚಿಸುವ ಪರಿಹಾರಗಳು ಸರಳವಾಗಿದ್ದು ಅನುಸರಿಸಲು ಸುಲಭವಾಗಿರುವುದು ಗಮನಾರ್ಹ. ಏಕೆಂದರೆ ಎಷ್ಟೋ ಬಾರಿ ಪರಿಹಾರಗಳೇ ಸಮಸ್ಯೆಯನ್ನು ಸೃಷ್ಟಿಸಿರುವ ಉದಾಹರಣೆಗಳು ಇಲ್ಲದೇ ಇಲ್ಲ. ಅದರಲ್ಲೂ ಸ್ತ್ರೀ ಮೂಲವಾದ ಸಮಸ್ಯೆಗಳಂತೂ ಇನ್ನೂ ಜಟಿಲ. ಬಹುಶಃ ಪುರುಷ ಪ್ರಧಾನ ಮನಸ್ಸುಗಳು ಇಂತಹ ಪರಿಹಾರವೇ ಆಗದಿರುವ ಸಮಸ್ಯೆಗಳ ಪರವಾಗಿ ಕೆಲಸ ಮಾಡುವುದು ಕಾರಣವಿರಬಹುದು. ಹಾಗಾಗಿ ಆ ಅಚಿಥ ಮನಸ್ಸುಗಳನ್ನು ವಿರೋಧಿಸಿ ಸರಳ ಪರಿಹಾರ ಸೂಚಿಸುವುದು ಸುಲಭವಲ್ಲ. ಈ ಸವಾಲನ್ನು ಸ್ವೀಕರಿಸಿ ಸಮಾಜ ಬದಲಾವಣೆಯ ಆಶಯವನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಹಾಗೂ ತಮ್ಮ ಸಿನಿಮಾಗಳಲ್ಲಿ ಬರಗೂರರು ಸದಾ ತರುತ್ತಿದ್ದಾರೆ.

ನಮ್ಮ ಸಮಾಜದಲ್ಲಿ ಹರಳುಗಟ್ಟಿರುವ ಹೆಣ್ಣಿನ ಪರಿಕಲ್ಪನೆ ತುಂಬಾ ಪ್ರಾಚೀನವಾದುದು ಮತ್ತು ಸಿದ್ಧ ಚೌಕಟ್ಟಿನ ಒಳಗೆ ರೂಪಿಸಲ್ಪಟ್ಟಿದುದು. ಹೆಣ್ಣು ಅಡುಗೆಯಿಂದ ಹಿಡಿದು ಉಡುಗೆವರೆಗೆ, ಮಾತಿನಿಂದ ಹಿಡಿದು ಆಲೋಚನೆವರೆಗೆ ಹೀಗೇ

ಇರಬೇಕೆಂದು ಸಿದ್ಧ ಮಾಡಿಟ್ಟ ಅಚ್ಚಿನಲ್ಲಿ ನಮ್ಮ ಸ್ತ್ರೀ ಸಮಾಜ ಬಾಳಿ ಬದುಕಿದ ಹಾದಿಯು ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ. ಅಂತಹದರಲ್ಲಿ ಬರಗೂರರು ತಮ್ಮ ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಈ ಅಚ್ಚನ್ನು ಹೊಡೆದು ಹೆಣ್ಣಿನ ಪಾತ್ರಗಳಿಗೆ ಸ್ವಾತಂತ್ರ್ಯ ಕಲ್ಪಿಸಿರುವುದು ಅವರ ಮನೋಧರ್ಮದ ಇನ್ನೊಂದು ಮುಖ. ಎಷ್ಟೋ ಲೇಖಕಿಯರ ಕತೆ ಕಾದಂಬರಿಗಳು ಪುರುಷ ಪ್ರಧಾನ ಸಮಾಜದ ಪ್ರತಿನಿಧಿಗಳಂತೆ ವರ್ತಿಸುವಾಗ ಬರಗೂರರ ಒಂದು ಊರಿನ ಕತೆ, ಬೆಂಕಿ, ಸೂರ್ಯ, ಕೋಟೆ, ಕರಡೀಪುರ, ಕ್ಷಾಮ, ಶಾಂತಿ, ಶಬರಿ ಈ ಕತೆಗಳು ಮತ್ತು ಸಿನಿಮಾಗಳು ಸೃಷ್ಟಿಸುವ ಸಂಚಲನ ಚೇತೋಹಾರಿಯಾದುದು. ಬರಗೂರರ ಸ್ತ್ರೀ ಪಾತ್ರಗಳು ಬಹುಪಾಲು ಮೃದು ಸ್ವಭಾವದವು. ಮುಗ್ಧವಾಗಿ ಸಮಾಜದ ಕುಟುಂಬದ ಪರಿಸರಕ್ಕೆ ಹೊಂದಿಕೊಂಡು ಬದುಕನ್ನು ನಡೆಸುವಂತಹವು. ಆದರೆ ತಮ್ಮ ಅಸ್ತಿತ್ವಕ್ಕೆ, ಶೋಷಣೆ ಹಾಗೂ ದಬ್ಬಾಳಿಕೆಗಳಿಂದ ಧಕ್ಕೆ ಬರುವುದೆಂದು ಅರಿವಾದಾಗ ಮಾತ್ರ ಒಮ್ಮೆಗೆ ಸಿಡಿದು ನಿಲ್ಲುವಂತಹವು. ಬರಗೂರರ ಇಂತಹ ಪಾತ್ರ ಚಿತ್ರಣಗಳು ನಮ್ಮ ಸಮಾಜದಲ್ಲಿ ಹುಟ್ಟಿನಿಂದಲೇ ಕುಟುಂಬದೊಳಗೆ ಸ್ತ್ರೀ–ಶೋಷಣೆ ಹೇಗೆ ಮಿಳಿತವಾಯಿತು ಎಂಬುದನ್ನು ಸಹಜವಾಗಿ ತೋರಿಸುತ್ತವೆ.

ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಬರಗೂರರು ತಮ್ಮ ಸಾಹಿತ್ಯ–ಸಿನಿಮಾಗಳಲ್ಲಿ ಸೈದ್ಧಾಂತಿಕ ಬದ್ಧತೆ, ಪ್ರಗತಿಪರ ಚಿಂತನೆ ಮತ್ತು ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಇದುವರೆಗಿನ ಚಿತ್ರರಂಗಕ್ಕೆ ಅಪಥ್ಯವಾಗಿದ್ದ ಅನೇಕ ಸಮಸ್ಯೆ, ವಸ್ತು–ವಿಷಯಗಳನ್ನು ಕೈಗೆತ್ತಿಕೊಂಡರು. "ಗಿರೀಶ್ ಕಾರ್ನಾಡ್, ಜಿ.ವಿ. ಅಯ್ಯರ್, ಲಕ್ಷ್ಮೀನಾರಾಯಣ, ಬಿ.ವಿ. ಕಾರಂತ– ಮುಂತಾದವರು ಹೊಸ ಅಲೆಯ ಚಿತ್ರ ನಿರ್ಮಾಣದಲ್ಲಿ ತೊಡಗಿದರಾದರೂ ಸಮಾಜದ ಸಮಸ್ಯೆಯ ಬೇರುಗಳನ್ನು ತಡಕುವ ಕೆಲಸಕ್ಕೆ ಕೈ ಹಾಕಲಿಲ್ಲ. ನಮ್ಮ ಸಮಾಜದ ಬದುಕಿಗೆ ಕಾರಣವಾದ ಜಾತಿ ಸಮಸ್ಯೆಯನ್ನಾಗಲೀ, ಅಸಮಾನತೆ, ಶೋಷಣೆ, ಯಜಮಾನ್ಯ ಸಂಸ್ಕೃತಿಗಳನ್ನಾಗಲಿ ಕೆಳಮಟ್ಟ ಶೋಧಿಸುವ ಸಾಹಸ ಮಾಡಲಿಲ್ಲ. ಭಾರತೀಯ ಸಿನಿಮಾ ರಂಗದಲ್ಲಿ ಹೊಸ ಅಲೆ ಚಿತ್ರಗಳನ್ನು ನೀಡಿದ ಈ ನಿರ್ದೇಶಕರು ಕೈಬಿಟ್ಟ ಗಂಭೀರವಾದ ಸಮಸ್ಯೆಗಳನ್ನು ಬರಗೂರು ತಮ್ಮ ಸಿನಿಮಾಗಳಲ್ಲಿ ಅಭಿವ್ಯಕ್ತಿಸುವ ಕೆಲಸ ಮಾಡಿ ಭಿನ್ನ ನೆಲೆಯನ್ನು ಕಂಡುಕೊಂಡರು" ಎಂಬ ವಿಚಾರಗಳು ಚರ್ಚಾರ್ಹವಾದವು. ಇಂತಹ ಸಂದರ್ಭದಲ್ಲಿ ಭಾರತೀಯ ಸಮಾಜದ ಆಂತರಿಕ ಸಮಸ್ಯೆ ಮತ್ತು ತಲ್ಲಣಗಳನ್ನು ಪ್ರಧಾನ ವಸ್ತುವನ್ನಾಗಿಸಿಕೊಂಡ ಕೃತಿಗಳನ್ನಾಧರಿಸಿದ ಚಿತ್ರಗಳನ್ನು ಬರಗೂರರು ದಿಗ್ದರ್ಶಿಸಿದರು. ತಮ್ಮ ಸಿನಿಮಾಗಳಲ್ಲಿ ಸ್ತ್ರೀ ಪರಿಕಲ್ಪನೆಯನ್ನು ದಟ್ಟವಾಗಿ ದಾಖಲಿಸಿ ಪರಿಣಾಮಕಾರಿಯಾದ ನಿರ್ದೇಶಕರೆನಿಸಿದರು. ಬೆಂಕಿ, ಸೂರ್ಯ, ಕ್ಷಾಮ, ಒಂದು ಊರಿನ ಕಥೆ, ಶಾಂತಿ, ಶಬರಿ– ಹೀಗೆ ಅವರ ಬಹುಪಾಲು ಕತೆ–ಕಾದಂಬರಿಗಳಲ್ಲಿ, ಸಿನಿಮಾಗಳಲ್ಲಿ, ಹರೆಯದ ಹೆಣ್ಣುಗಳ ಮಾನಸಿಕ, ದೈಹಿಕ ಸಮಸ್ಯೆ ಮತ್ತು ತಲ್ಲಣಗಳನ್ನು ತೆರೆದಿಟ್ಟಿದ್ದಾರೆ. ಹಾಗೆಯೇ ಭ್ರಷ್ಟ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಹೆಣ್ಣಿನ ಪಾತ್ರಗಳನ್ನು ಬರಗೂರರು ಬಹಳ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಅಡಿ ಟಿಪ್ಪಣಿಗಳು:

1 ಹಂಪ ನಾಗರಾಜಯ್ಯ (ಸಂ) ವಿಚಾರ ಸಾಹಿತ್ಯ: 3 ಅನುವಾದ: ಸಿದ್ದಲಿಂಗ ಪಟ್ಟಣಶೆಟ್ಟಿ, ಪುಟ: 40–41, 1994

2 ಶಶಿಕಲಾ ವೀರಯ್ಯಸ್ವಾಮಿ (ಸಂ) ಸಂವೇದನೆ ಪುಟ: 100, 1995

3 ಮರಳಸಿದ್ದಪ್ಪ ಕೆ. ನಾಗರಾಜು ಕಿ.ರಂ. (ಸಂ) ವಚನ ಕಮ್ಮಟ, ಪುಟ: 78, 1983

4 ಮರಳಸಿದ್ದಪ್ಪ ಕೆ. ನಾಗರಾಜು ಕಿ.ರಂ. (ಸಂ) ವಚನ ಕಮ್ಮಟ, ಪುಟ: 82, 1983